ಮಾಡಕ್ಕಾಗದಿದ್ರೆ? ಅಂತ ಅಲವತ್ತುಕೊಂಡು ಹಾಲಲ್ಲಿ ಅಡ್ಡಾಡಿದ. ಏನೋ ಅನಿಸಿ ಮಲಗೊ ಕೋಣೆಗೆ ಹೋಗಿ ವಾರ್ಡ್‌ರೋಬ್ ತೆರೆದ. ಸೂಟುಕೇಸು ಅಲ್ಲೆ ಇತ್ತು. ಬಟ್ಟೆಬರೆಗಳು ಯಥಾಸ್ಥಿತಿಯಲ್ಲಿದ್ದುವು. ಸೂಟುಕೇಸು ತೆರೆದ. ಪಾಸುಬುಕ್ಕುಗಳು, ಯಾವುದೊ ಕಾಗದಪತ್ರಗಳು, ಒಂದಿಷ್ಟು ಹಣ ಎಲ್ಲ ಇತ್ತು. 'ನಾನಿಲ್ಲದಿರುವಾಗ ನನ್ನ ಸೂಟುಕೇಸ್‌ನಲ್ಲಿ ಏನು ಹುಡುಕ್ತಿದೀಯ?' ತೀರ ಹತ್ತಿರದಲ್ಲಿ ಸ್ವರ ಕೇಳಿಸಿದಾಗ ಮೈಮೇಲೆ ಬಿಸಿನೀರು ಬಿದ್ದಂತಾಗಿ ತಿರುಗಿದವನತ್ತ ಕಳ್ಳನನ್ನು ಹಿಡಿದ ಗತ್ತಿನಲ್ಲಿ ನೋಡುತ್ತಾ ನಿಂತಿದ್ದಳು ವಲ್ಲರಿ. 'ಅಲ್ಲ... ಅದೂ... ನೀನು ಹನ್ನೊಂದಾದ್ರು ಬರಲಿಲ್ವಲ್ಲಾ... ಆತಂಕಕ್ಕೆ...' ಸಮರ್ಥನೆಗೆ ಮುಂದಾದ. '...ನಾನು ಸೂಟುಕೇಸ್‌ನಲ್ಲಿರಬಹುದು ಅಂತಾನಾ ನಿನ್ನನುಮಾನ?' ಮಾತು ಬೆಳೆಸದೆ ಹಾಲಿನತ್ತ ಹೊರಟವಳನ್ನು ದೊಡ್ಡ ಇಕ್ಕಟ್ಟಿನಿಂದ ಪಾರಾದವನಂತೆ ನಿಟ್ಟುಸಿರು ಬಿಟ್ಟು ಹಿಂಬಾಲಿಸುತ್ತ, 'ಅಲ್ಲ, ಯಾಕಿಷ್ಟು ತಡ? ಫೋನೂ ತಗೊಳ್ಳಿಲ್ಲ. ಏನೂ ಅಂತ ತಿಳಕೊಳ್ಳಿ?...' ಅಂದ. ವಲ್ಲರಿ ಸೋಫಾದಲ್ಲಿ ಒರಗಿ ದೀರ್ಘಶ್ವಾಸ ಬಿಟ್ಟಳು. ಯಾವುದೋ ದೊಡ್ಡ ಖುಷಿ ಅನುಭವಿಸಿ ಬಂದದ್ದರ ಅವಶೇಷ ಮುಖದಲ್ಲಿನ್ನೂ ಇತ್ತು. 'ನನ್ನಮ್ಮ ತಮ್ಮ ಬಂದಿದಾರೆ ಗೊತ್ತಾ? ಅವರ ಜೊತೇನೆ ಇದ್ದೆ ಇಷ್ಟೊತ್ತು. ಊಟಾನು ಮಾಡಿದ್ವಿ. ಏನೇನೊ ಖರೀದಿ ಮಾಡಿದ್ರು...' ಬೇರಿಗೆ ಮತ್ತೆ ನೀರು ಸಿಕ್ಕಂತ ಪ್ರಸನ್ನತೆ ಅರಳತೊಡಗಿತು. ಇವನ ಗಲಿಬಿಲಿ ಕಂಡು 'ನಡಿಯೆ ನಿನ್ನ ರೂಮ್‌ನಲ್ಲೆ ಅಡ್ಜೆಸ್ಟ್ ಮಾಡಿಕೊಂಡ್ರಾಯ್ತು, ತುಂಬಾ ಮಾತಾಡಬೇಕು ಅಂತೆಲ್ಲಾ ಅಮ್ಮ ಪಾಪ... ಎಷ್ಟು ಆಸೆಯಿಂದಿದ್ರೋ...' 'ಮತ್ತೆ...?' 'ಹ್ಯಾಗೆ ಕರಕೊಂಡು ಬರೋದು ಇಲ್ಲಿಗೆ? ನಾನೊಬ್ಬೇ ಅಲ್ಲ, ಒಂದು ಗೂಳಿನೂ ಇದೆ ಜತೆಗೆ ಅಂತಾ ಅವರಿಗೇನು ಗೊತ್ತು? ಲೇಡೀಸ್ ಹಾಸ್ಟೆಲು ಸ್ಟ್ರಿಕ್ಟು ಅಂತಾ ಹೇಳಿದೆ. ಹೋಟೆಲಲ್ಲಿ ರೂಮು ಮಾಡಿದಾರೆ.' ಮೊದಲ ಬಾರಿ ಒಂದು ಭಾವನಾತ್ಮಕ ತಾಕಲಾಟದಲ್ಲಿ ಅವಳನ್ನು ನೋಡಿದವನಿಗೆ, ಬಾಂಧವ್ಯದ ಸಾನಿಧ್ಯ ಹೇಗೆ ಅಲ್ಲಾಡಿಸಿಬಿಡುತ್ತಲ್ಲ ಅನಿಸಿ ಕನಿಕರಭರಿತ ಅಕ್ಕರೆ ಹುಟ್ಟಿಬಿಟ್ಟಿತು. 'ಊಟ ಮಾಡೋಣ್ವ...' ಕೇಳಿದ್ದಕ್ಕೆ, 'ನಂದಾಯ್ತು, ನೀನು ಮಾಡು' ಅಂದಳು ಕಣ್ಣುಮುಚ್ಚಿ ಒರಗಿಕೊಂಡ ಅದೇ ಭಂಗಿಯಲ್ಲಿ. ಅಡುಗೆ ಸರಿಯಿರಲಿಲ್ಲ. ಒಬ್ಬನೆ ಸೇರಿದಷ್ಟು ತಿಂದು, ಬಾಕಿ ಮುಚ್ಚಿಟ್ಟು ರೂಮಿಗೆ ಬಂದರೆ ಅವಳಾಗಲೆ ಹಾಸಿಗೆಯಲ್ಲಿ ಅಡ್ಡಾಗಿದ್ದಳು. ಪಕ್ಕದಲ್ಲಿ ಮಲಗಿ ದೀಪವಾರಿಸಿದವ ಗಳಿಗೆ ಮೊದಲು ಅನುಭವಿಸಿದ ಅಕ್ಕರೆಯ ಪ್ರಭಾವದಲ್ಲಿ 'ವಲ್ಲರೀ...' ಅಂತ ಪಿಸುಗುಟ್ಟಿದ. 'ಏನೋ?' ಅಂದದ್ದಕ್ಕೆ ಉತ್ತರವಾಗಿ ಕೈಮುಟ್ಟಿದ. 'ಆಗ್ಲೆ ಮಧ್ಯರಾತ್ರಿ. ನಂಗೆ ನಿದ್ದೆ ಒತ್ತಿಕೊಂಡು ಬರ್ತಿದೆ, ಮಲಗು' ಅಂತ ಆಕಳಿಸಿದಳು. 'ಪ್ಲೀಸ್ ಕಣೇ... ನನ್ನನ್ನ ಎಳಕೊಂಡ್ಹೋಗ್ತಿದೆ, ಪ್ಲೀಸ್...' ಅವನ ಗೋಗರೆತದಲ್ಲಿನ ಗಂಡಿನ ಸೋಲಿಗೆ ಹೆಣ್ಣಿನ ದಾತೃತ್ವದ ಅಹಂ ಸಾಧಿಸುವಂತೆ, ಇತ್ತ ತಿರುಗಿ ಬಾ ಅನ್ನುತ್ತ ಬಳಸಿಕೊಂಡಳು. ಹೊರಗೆ ರಾತ್ರಿಯ ಕತ್ತಲ ಜಗತ್ತು ಮಾತು ಸಾಕಾಗಿ ಮೌನದಲ್ಲಿ ಕಳೆದುಕೊಳ್ಳತೊಡಗಿತ್ತು.

ಧನಂಜಯ ಸ್ನಾನ ಮುಗಿಸಿ ಬರುವಾಗ ವಲ್ಲರಿ ತಿಂಡಿ ತಯಾರಿಯಲ್ಲಿದ್ದಳು. ಇವತ್ತು ವಾಷಿಂಗ್ ಮಷೀನಿಗೆ ಬಟ್ಟೆ ಹಾಕಬೇಕೆಂಬುದು ನೆನಪಾಯ್ತು. 'ನಿನ್ನ ತೊಳಿಯೋ ವಸ್ತ್ರ ಯಾವ್ಯಾವ್ದು ಅಂತ ತೆಗೆದುಕೊಡು ಅಥವ ನಾನೆ ವಾರ್ಡುರೋಬಿಂದ ತೊಗೊಳ್ಲ?...' ಅಂದ. 'ನಿಂಗೆ ಯಾವ್ಯಾವ್ದು ಅಂತಾ ಹೇಗೆ ಗೊತ್ತಾಗುತ್ತೆ? ನಾನೇ ಕೊಡ್ತೀನಿ' ಅಂದವಳು ಮತ್ತೆ ಇತ್ತ ತಿರುಗಿ 'ಹೌದೂ, ನಿನ್ನೆ ನನ್ನ ಸೂಟುಕೇಸಲ್ಲಿ ಏನು ಹುಡುಕಿದ್ದು?' ಸ್ವರದಲ್ಲಿ ಗಂಭೀರತೆಯಿತ್ತು. ಉತ್ತರಕ್ಕೆ ತಡವರಿಸುವಾಗ 'ನಾನೇ ಹೇಳತೀನಿ ಕೇಳು: ಅಷ್ಟು ಹೊತ್ತಾದ್ರೂ ನಾನು ಬರದಿದ್ದು